**ಪಿಡಬ್ಲೂ: 4** **ಅಸಲು ದಾವೆ ನಂ.10/2022**

**<u>ದಿನಾಂಕ 09-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀಸವಾಲು: ಪ್ರತಿವಾದಿ ಪರ ವಕೀಲರಿಂದ:-</u>**

1. ವಾದಿ ಆಸ್ತಿ ಸಂ.41 ರ ಮೇಲೆ ಈ ಕೇಸನ್ನು ಹಾಕಿರುತ್ತಾರೆ. ಈ ದಾವೆಯನ್ನು ಏನೆಂದು ಹಾಕಿದ್ದಾರೆಂದು ಮಾಹಿತಿ ಇಲ್ಲ. 1 & 2 ನೇ ಪ್ರತಿವಾದಿಗಳು 12 X 25 ಜಾಗದಲ್ಲಿ ಕಿರಾಣಿ ಅಂಗಡಿ, 13 X 25 ರಲ್ಲಿ ಸಪ್ಲೈ ಅಂಗಡಿ ಇದೆ ಎಂದರೆ ಸರಿಯಲ್ಲ. ಅವರ ಕುಟುಂಬ ಸದಸ್ಯರೆಲ್ಲರೂ ಸಹ ಅಲ್ಲಿಯೇ ವಾಸಿಸುತ್ತಿದ್ದಾರೆ ಎಂದರೆ ಸರಿಯಲ್ಲ.

2. ಸಾಕ್ಷಿಗೆ ಒಂದು ಫೋಟೋವನ್ನು ತೋರಿಸಲಾಗಿ ಸದರಿ ಅಂಗಡಿ ಪ್ಲಾಟ್ ನಂ.41 ರಲ್ಲಿಯೇ ಇದೆ ಎಂದರೆ ಸರಿಯಲ್ಲ. ವಾದಿಯ ತಂದೆ ಮಾಂತು ಎಂಬುವವರಿಗೆ 2006 ರಲ್ಲಿ 25 X 40 ಜಾಗವನ್ನು ಮಾರಾಟಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ಅಂಗಡಿಗಳಿಗೆ ಕರೆಂಟ್ ಸಪ್ಲೈ ಪಡೆದಿದ್ದಾರೆ ಎಂದರೆ ಸಾಕ್ಷಿಯು ತೆಗೆದುಕೊಂಡಿರಬಹುದು ಎನ್ನುತ್ತಾರೆ. ಪ್ರತಿವಾದಿಗಳಿಗೆ ಜನತಾ ಮನೆ ಮಂಜೂರು ಆಗಿತ್ತು ಎಂದರೆ ಸಾಕ್ಷಿಯು ಸದರಿ ಜಾಗದಲ್ಲಿ 1 & 2 ನೇ ಪ್ರತಿವಾದಿಗಳು ಅಂಗಡಿ ಹಾಕಿಲ್ಲ ಎನ್ನುತ್ತಾರೆ. 1 & 2 ನೇ ಪ್ರತಿವಾದಿಗಳಿಗೆ ಪ್ಲಾಟ್ ನಂ.41 ರಲ್ಲಿ 25 X 40 ಜಾಗದಲ್ಲಿ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

3. ವಾದಿಯ ತಾಯಿಯ ಹೆಸರು ಶಿಫಾಲಿ. ಶಿಫಾಲಿಯ ಸ್ವಂತ ತಂಗಿಯನ್ನು ನೀವು ಮದುವೆ ಮಾಡಿಕೊಂಡಿದ್ದೀರಿ ಎಂದರೆ ಸರಿ.

4. ನಿಮ್ಮ ಮು.ವಿ.ಪ್ರ.ಪತ್ರದಲ್ಲಿ ಬರೆದ ಅಂಶಗಳ ಬಗ್ಗೆ ನನಗೆ ಮಾಹಿತಿ ಇಲ್ಲ.

3. ನೀವು & ವಾದಿ ಸಂಬಂಧಿಕರು, ಆದ್ದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿ.

**ಮರು ವಿಚಾರಣೆ ಇಲ್ಲ:-**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ., ಸಿಂಧನೂರು.**